ಮೇಸ್ತ್ರ ಮನಸ್ಸು ಏನೋ ಹೇಳಲು ಬಯಸುತ್ತಿದೆ ಎಂದು ಲಾಮೂ ಭಾಯಿಯವರಿಗೆ ಅನ್ನಿಸಿತು. ಆದರೆ ಈ ಮಧ್ಯೆ ಒತ್ತಡದ ಮತ್ತು ಸಂಕೋಚದ ಗೋಡೆಯೊಂದು ಅಡ್ಡ ಬರುತ್ತಿದೆ... ಗಂಟಲಿಗೆ ಬಂದ ವಿಷಯ ಬಾಯಿಯಿಂದ ಹೊರಗೆ ಬರುತ್ತಿಲ್ಲ...

'ಬಸಂತರಾಯ್, ನಿಮ್ಮ ಕುಟುಂಬವನ್ನು ಇಲ್ಲಿಯೇ ಇಟ್ಟುಕೊಳ್ಳಲು ಏನು ಅಡ್ಡಿಯಾಗಿದೆ?'

'ಸಾರ್...' ಅವರ ನೊಂದ ಧ್ವನಿಯಲ್ಲಿ ಮತ್ತೆ ಒರಟುತನ ಕಂಡು ಬಂತು.

'ಹೆದ್ರಬೇಡಿ, ಇರುವುದನ್ನು ಹೇಳಿ, ನಾನೂ ಸಹ ಅದಕ್ಕೆ ಒಂದು ಮಾರ್ಗ ಹುಡುಕಲು ಪ್ರಯತ್ನಿಸುತ್ತೇನೆ.'

'ಸಾರ್, ಇಲ್ಲಿ ನನ್ನ ಕುಟುಂಬವನ್ನು ಕರೆತಂದರೆ ನನ್ನ ಮಕ್ಕಳ ವಿದ್ಯಾಭ್ಯಾಸದ ಮೇಲೆ ಪರಿಣಾಮ ಬೀರುತ್ತೆ.'

'ಅವರು ಯಾವ ತರಗತಿಯಲ್ಲಿ ಓದುತ್ತಿದ್ದಾರೆ?'

'ಹುಡುಗ ಒಂಬತ್ತು, ಹುಡುಗಿ ಎಂಟು, ಕೊನೆಯ ಹುಡುಗ ಆರನೆಯ ತರಗತಿಯಲ್ಲಿ.'

'ನೀವು ಖಂಡಿತಾ ಕಷ್ಟದಲ್ಲಿದ್ದೀರಾ.'

'ನಮ್ಮ ಸರ್ಕಾರ ಇದನ್ನೆಲ್ಲಾ ಎಲ್ಲಿ ನೋಡುತ್ತೆ?'

'ಹೌದು ಮೇಸ್ತ್ರೆ, ಈ ವ್ಯವಸ್ಥೆಯೇ ಹೀಗಿದೆ. ಇದು ನಿಮ್ಮೊಬ್ಬರ ಪ್ರಶ್ನೆಯಲ್ಲ. ಶಿಕ್ಷಕರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ ಎಂಬುವುದು ನನಗೆ ತಿಳಿದಿದೆ, ನನಗೆ ಅರ್ಥವೂ ಅಗುತ್ತೆ.'

'ಸಾರ್, ಇದಕ್ಕೆ ಯಾವ ಉಪಾಯವಿಲ್ಲವೇ?'

'ಇಲ್ಲ, ಸದ್ಯಕ್ಕಂತೂ ಇಲ್ಲ. ಆಡಳಿತದಲ್ಲಿರುವವರು ಎಲ್ಲವನ್ನೂ ಮರೆತಿದ್ದಾರೆ. ಅವರಿಗೆ ನೋಡುವ ಕಣ್ಣುಗಳಿಲ್ಲ. ತಂತ್ರಗಾರಿಕೆಯಿಂದ ನಡೆಸಬೇಕೆಂಬ ತಿಳಿವಳಿಕೆ ಸಹ ಇಲ್ಲ.'

'ಹೀಗೇಕೆ ಆಗುತ್ತೆ?...' ಮೇಸ್ತ್ರ ಮನಸ್ಸು ತೆರೆದು ಕೊಳ್ಳುತ್ತಿತ್ತು.

'ಸ್ವಾರ್ಥ, ಅಧಿಕಾರದ ಮದ...ಲಂಚದ ಆಸೆ...'

'ಸಾರ್, ನೀವು ನಿಜವನ್ನೇ ಹೇಳುತ್ತಿದ್ದೀರ! ಲಂಚವೇ ನಮ್ಮನ್ನು ನಾಶ ಮಾಡಿಬಿಟ್ಟದೆ...'

'ಹೇಗೆ?'

'ನನ್ನ ಮಗ ಎಂಟನೆಯ ತರಗತಿಗೆ ಬಂದಾಗ, ನಾನು ಹೈಸ್ಕೂಲಿನ ಪೋಸ್ಟ್ ಕೇಳಿದ್ದೆ. ನನಗೆ ವರ್ಗಾವಣೆ ಸಿಗಲಿಲ್ಲ. ತುಂಬಾ ಪ್ರಯತ್ನಿಸಿದೆ. ಆಗ ಒಬ್ಬ ಅಧಿಕಾರಿಯೊಂದಿಗೆ ಭೇಟಿಯಾಯಿತು, ಅವನು ಲಂಚಕೋರನಾಗಿದ್ದ. ಅವನ ಹೆಸರು ಬಿನು ಭಾಯಿ. ಅವನು ಮುನ್ನೂರು ರೂಪಾಯಿಗಳನ್ನು ಕೇಳಿದ. ನಾನು ಕೊಡಲ್ಲ ಎಂದೆ. ಅವನು ನನ್ನನ್ನು ದೂರದ ಹಳ್ಳಿಗೆ ತಳ್ಳಿದ. ನನ್ನ ಕುಟುಂಬ ಚದುರಿತು, ನಾನು ಹಾಳಾದೆ. ಈಗ ನಾನು ಶಿಕ್ಷಕನಾಗಿ ಉಳಿಯಲಿಲ್ಲ...ನಾನು ಬದುಕಿಲ್ಲ, ಹೆಣವಾಗಿದ್ದೇನೆ.'

'ಇಂಥ ಪರಿಸ್ಥಿತಿಯಲ್ಲಿ ಯಾರೇ ಶಿಕ್ಷಕರ ಪರಿಸ್ಥಿತಿ ಹೀಗೆಯೇ ಆಗುತ್ತದೆ. ಶಿಕ್ಷಕರಲ್ಲಿ ಸಮರ್ಪಣಾ ಭಾವನೆಯಿರಬೇಕೆಂದು ಹೇಳಲಾಗುತ್ತದೆ, ಆದರೆ ಇಂಥ ಶ್ರಮಜೀವಿ ಉಪಾಧ್ಯಾಯರಿಗೆ ಕಷ್ಟ ಕೊಟ್ಟು ದೇಶಕ್ಕೆ ಅದೆಷ್ಟು ಹಾನಿ ಮಾಡುತ್ತಿದ್ದೇವೆ ಎಂದು ಅವರು ಲೇಶಮಾತ್ರವೂ ಯೋಚಿಸುವುದಿಲ್ಲ.' ನಂತರ ಲಾಮೂ ಭಾಯಿ ಮೆಲ್ಲನೆ ಹೇಳಿದರು,'ನೀವು ತಿಳಿವಳಿಕಸ್ಥರು, ಶಾಲೆಯಲ್ಲಿ ಇರ್ತೀರ. ಇಂಥ ಹಳ್ಳಿಯಲ್ಲಿ ಇದೇ ದೊಡ್ಡ ತಪಸ್ಸು.'

'ಸಾರ್! ನನ್ನನ್ನು ಹೊಗಳಬೇಡಿ. ನನ್ನ ಮನಸ್ಸಿನಲ್ಲಿ ಸೇಡಿನ ಭಾವನೆ ಕಿಡಿಯಾಡಿತ್ತು...ನನ್ನ ಮಕ್ಕಳನ್ನು ನನ್ನಿಂದ ದೂರವಿಟ್ಟುಕೊಳ್ಳುವುದು, ಅವರನ್ನು ನೋಡಿಕೊಳ್ಳದಿರುವುದು ನನಗೆ ಅತೀವ ವೇದನೆಯನ್ನುಂಟು ಮಾಡುತ್ತಿತ್ತು. ಹೀಗಾಗಿ ನಾನು ಯಾವುದೇ ಮಕ್ಕಳಿಗೆ ಪಾಠವನ್ನು ಬೋಧಿಸುವುದಿಲ್ಲವೆಂದು ತೀರ್ಮಾನಿಸಿದೆ.'

'ಸರಿಯಾದ ಮಾತನ್ನೇ ಹೇಳುತ್ತಿದ್ದೀರ. ಈ ಕಾಲದಲ್ಲಿ ಪ್ರಾಮಾಣಿಕತೆಯ ಮಾತುಗಳನ್ನು ಹೇಳುವುದು ಸುಲಭ... ಆದರೆ, ಪ್ರಾಮಾಣಿಕತೆ ಉಳಿಯಬೇಕೆಂಬ ವಾತಾವರಣವನ್ನು ರೂಪಿಸುವುದು ತುಂಬಾ ಕಷ್ಟ...'

'ಸಾರ್...' ಮೇಸ್ತ್ರ ಮನಸ್ಸು ತುಂಬಿ ಬಂತು. ಅವರು ಎಲ್ಲವನ್ನೂ ಹೇಳಲು ಕಾತರರಾದರು, 'ನಾನು ಪಾಠವನ್ನೇ ಮಾಡಲ್ಲ. ಇನ್‌ಸ್ಪೆಕ್ಷನ್ ನಡೆಯಲಿ, ದೂರುಗಳ ಸಲ್ಲಿಕೆಯಾಗಲಿ, ವಿಜಿಟ್‌ಗೆ ಬರಲಿ... ವರ್ಗಾವಣೆಯಾಗಲಿ ಅಥವಾ ಇನ್‌ಕ್ರಿಮೆಂಟ್ ರದ್ದಾಗಲಿ, ಎಲ್ಲವನ್ನೂ ಸಹಿಸಿಕೊಳ್ಳಲು ಸಿದ್ಧನಾಗಿದ್ದೆ. ಆದರೆ ಪಾಠ ಮಾಡಲು ಸಿದ್ಧನಾಗಿರಲಿಲ್ಲ... ನಾನು ಜಡವಾಗಿಬಿಟ್ಟದ್ದೆ, ಅಧಿಕಾರಿಗಳೊಂದಿಗೆ, ನಿರೀಕ್ಷಕರೊಂದಿಗೆ ಸೇಡು ತೀರಿಸಿಕೊಳ್ಳುವ ಬಗ್ಗೆಯೇ ಯೋಚಿಸುತ್ತಿದ್ದೆ...'

'ಶಾಭಾಶ್! ಸಣ್ಣ ಅನ್ಯಾಯಕ್ಕೂ ಚಿಂತಿಸುವ ಶಿಕ್ಷಕರೇ